LEAKING OF ERANAVODDU TANK BUND IN SALGAME HOBLI

540 SRI B. NANJAPPA (GANDASI) :— Will the Minister of State for Minor Irrigation be pleased to state :—

(*a*) the sanctioned estimated cost of the Eranvoddu in Salagame Hobli, Hassan Taluk and when the work was taken up for execution ;

(*b*) the up-to-date progrees of the work and to whom the work is entrusted :

(*c*) whether it is a fact that the work has already been completed;

(*d*) whether it has come to the notice of Government that the tank bund is already leaking in several places :

(*e*) if so, the action the Government proposes to take in this behalf?

SMT. BASAVARAJESHWARI (Deputy Minister for Social welfare) [on behalf of SRI. A J DODDAMETI] (Minister of State for Minor Irrigation):

(*a*) Rs. 90,000.

The work was taken up in December 1969.

(*b*) Total outlay to end of 31st December 1969 is Rs. 81,158. The work was entrusted to Sri Mudda Boyi Contractor on Tender basis.

(*c*) Not completid, but it is nearig completion.

(*d*) It is stated that there is only one leak at the 1st grade of the existing old bund and that no leaks are noticed in other grades of the newly filled breached position.

(*e*) The P. W. D. has taken action to close the leak.

ಶ್ರೀ ಬಿ ನಂಜಪ್ಪ :— ಈ ಕಾಮಗಾರಿಯನ್ನು ೧೯೬೯ನೇ ಡಿಸೆಂಬರಿನಲ್ಲಿ ಕೈಕೊಂಡು ೩೧ನೇ ಡಿಸೆಂಬರ್ ೧೯೬೯ ರವರೆಗೆ ೮೧,೧೫೮ ರೂಪಾಯಿ ಖರ್ಚಾಗಿದೆ ಎಂದು ಉತ್ತರ ಇದೆ. ಹಾಗಾದರೆ ಒಂದು ತಿಂಗಳಲ್ಲಿ ೮೧,೧೫೮ ರೂಪಾಯಿಗಳ ಕೆಲಸವಾಗಿದೆಯೆ?

ಶ್ರೀಮತಿ ಬಸವರಾಜೇಶ್ವರಿ :— ಸುಮಾರು ೬೯-೭೯ ರಲ್ಲಿ ಈ ೯೦ ಸಾವಿರ ರೂಪಾಯಿ ಅಂದಾಜಿನ ಕೆಲಸ ಶುರುವಾಗಿದೆ. ಈಗ ಸುಮಾರು ೮೧,೧೫೮ ರೂಪಾಯಿಗಳ ಕೆಲಸವಾಗಿದೆ. ಎಷ್ಟು ತಿಂಗಳಲ್ಲಿ ಖರ್ಚಾಗಿದೆಯೆಂಬ ಮಾಹಿತಿ ನನ್ನಲ್ಲಿಲ್ಲ.

ಶ್ರೀ ಬಿ ನಂಜಪ್ಪ :— ೧೯೬೯ನೇ ಡಿಸೆಂಬರಿನಲ್ಲಿ ಕೆಲಸ ಕೈಕೊಳ್ಳಲಾಗಿದೆ. ೩೧ನೇ ಡಿಸೆಂಬರ್ ೧೯೬೯ ರವರೆಗೆ ೮೧,೧೫೮ ರೂಪಾಯಿ ವೆಚ್ಚವಾಗಿದೆ ಎಂದರೆ ಅದರ ಅರ್ಥವೇನು? ಒಂದು ತಿಂಗಳಲ್ಲಿ ಇಷ್ಟು ಪ್ರೋಗ್ರೆಸ್ ಆಗಿದೆಯೇ?

ಶ್ರೀಮತಿ ಬಸವರಾಜೇಶ್ವರಿ :— ಆಕ್ಚ್ಯುಯಲ್ ತಾರೀಖು ಗೊತ್ತಿಲ್ಲ, ವೆರಿಫೈ ಮಾಡುತ್ತೇನೆ.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ :— ಉತ್ತರದಲ್ಲಿ ಮುದ್ದಾ ಬೋಯಿ ಎಂಬ ಕಂಟ್ರಾಕ್ಟರಿಗೆ ಈ ಕೆಲಸ ವಹಿಸಿದೆ ಎಂದು ತಿಳಿಸಿದೆ. ಈ ಕಂಟ್ರಾಕ್ಟರಿಗೆ ಲೈಸೆನ್ಸ್ ಮಂಜೂರಾಗಿರುವುದು ಯಾವಾಗ? ಈ ಕಂಟ್ರಾಕ್ಟರು

ಎಂಜಿನಿಯರನ್ನಿಟ್ಟುಕೊಂಡು ಕೆಲಸ ನಡೆಸುವುದು ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಕ್ರಮವೇನು ತೆಗೆದು ಕೊಳ್ಳಲಾಗುವುದು? ಈ ಕೆಲಸಕ್ಕೆ ಲೈಸೆನ್ಸ್ ತೆಗೆದುಕೊಳ್ಳುವುದಕ್ಕೆ ಮುಂಚೆ ಅವರು ಕಂಟ್ರಾಕ್ಟರಾಗಿದ್ದರೆ? ಯಾವಾಗ ಇವರಿಗೆ ಕಂಟ್ರಾಕ್ಟು ವಹಿಸಿದೆ?

ಶ್ರೀಮತಿ ಬಸವರಾಜೇಶ್ವರಿ ;— ಈ ಕಂಟ್ರಾಕ್ಟರು ಎಂಜಿನಿಯರನ್ನು ಇಟ್ಟುಕೊಂಡಿರುವುದು ಗೊತ್ತಿಲ್ಲ. ಆದರೆ ಕೆಲಸಮಾಡಿದ್ದಾರೆ, ಅವರು ಮಾಡಿರುವ ಕಡೆ ಬ್ರೀಚ್ ಆಗಿಲ್ಲ.

SRI H. N. NANJE GOWDA :— It is stated in the answer that the work was taken up in December 1969 and at the end of December 1969 there was progress made in the work to the tune of Rs. 81,158 out of the total estimated cost of Rs. 90,000. I want to know whether it is not a fact that this work work was executed by the Executive Engineer in his unofficial capacity and claimed the bills by presenting bogus vouchers?

SMT. BASAVARAJESWARI ;— That information is not available with me. But as far as the work executed by the contractor is concerned, there has been no breach in that portion of the work.

SRI. C. K. RAJAIAH SHETTY ;— On the face of the reply itself there seems to be something fishy about this matter. Is it not necessary to investigate the matter and take necessary action?

ಶ್ರೀ ಕೆ ಪುಟ್ಟಸ್ವಾಮಿ ;— (ನ್ಯಾಯ ಮತ್ತು ಕಾರ್ಮಿಕ ಶಾಖೆಗಳ ಮಂತ್ರಿಗಳು) ವಿಚಾರ ಮಾಡುತ್ತೇವೆ.

ಶ್ರೀ ಬಿ ನಂಜಪ್ಪ :— ಈ ಕೆರೆ ಕೆಲಸ ಪೂರ್ಣವಾಗಿರುವುದು ಗಮನಕ್ಕೆ ಬಂದಿದೆಯೇ? ಕಾಮಗಾರಿ ಪೂರ್ಣಗೊಳ್ಳುವುದರಲ್ಲಿದೆ ಎಂದು ಉತ್ತರದಲ್ಲಿದೆ. ನಾನು ನೋಡಿರುವ ಹಾಗೆ ಪೂರ್ತಿ ಕೆಲಸವಾಗಿದೆ. ಕೆಲಸವೇನೂ ಉಳಿದಿಲ್ಲ. ಹಾಗಿರುವಾಗ ಎರಡು ಮೋಳೆ ಬಿದ್ದು ಏರಿ ಒಡೆಯುವ ಪರಿಸ್ಥಿತಿ ಇದೆ. ಎಗ್ಸಿಕ್ಯುಟಿವ್ ಎಂಜಿನಿಯರಿಗೆ ಇದನ್ನು ಹೇಳಿದಾಗ ರಿಪೇರಿ ಮಾಡುತಿದ್ದಾರೆ. ಈ ರಿಪೇರಿಗಾಗುವ ಖರ್ಚನ್ನು ಕೊಡುವವರು ಯಾರು? ಎಗ್ಜಿಕ್ಯುಟಿವ್ ಎಂಜಿನಿಯರು ಸರಿಯಾಗಿ ಸೂಪರ್‌ವೈಜ್ ಮಾಡದಿರುವುದರಿಂದ ಇದಕ್ಕೆ ಜವಾಬ್ದಾರರು ಯಾರು?

ಶ್ರೀಮತಿ ಬಸವರಾಜೇಶ್ವರಿ :— ಸುಮಾರು ನೂರು ವರ್ಷದ ಕೆರೆಯ ಜೀರ್ಣೋದ್ಧಾರ ಮಾಡ ಲಾಗುತ್ತಿದೆ. ಈಗ ಕೆಲಸಮಾಡಿರುವ ಕಡೆ ನೀರು ಸೋರುವುದಿಲ್ಲ, ಬೆಟ್ಟದ ಕಡೆ ಲೀಕ್ ಆಗುವುದು ಕಂಡುಬಂದಿದೆ, ಅಲ್ಲಿ ಲೂಸ್ ಸಾಯಿಲ್ ಮುಂತಾದ್ದಿರುವುದರಿಂದ ಲೀಕ್ ಆಗುವುದೆಂದು ತಿಳಿದು ಅದನ್ನು ಸರಿಮಾಡಲು ಪ್ರಯತ್ನನಡೆದಿದೆ. ಮುಂದಿನ ವರ್ಷ ಕೆರೆಯಲ್ಲಿ ನೀರು ನಿಲ್ಲಲು ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

[Some Hon. Members rose]

ಉಪಾಧ್ಯಕ್ಷರು :— ಮಾನ್ಯ ಸದಸ್ಯರು ಬೇಕಾದರೆ ಅರ್ಧ ಘಂಟೆ ಚರ್ಚೆಗೆ ನೋಟೀಸ್‌ಕೊಡಬಹುದು

ಶ್ರೀ ಎನ್ ಹುಚ್ಚಮಾಸ್ತಿ ಗೌಡ :— ಅವರು ಲೀಕ್ ಆಗುವುದನ್ನು ರಿಪೇರಿಮಾಡುವ ಖರ್ಚನ್ನು ಯಾರು ವಹಿಸುವರು ಎಂದು ಕೇಳಿದ್ದಕ್ಕೆ ಉತ್ತರ ಬಂದಿಲ್ಲ.

ಶ್ರೀಮತಿ ಬಸವರಾಜೇಶ್ವರಿ :— ಕಂಟ್ರಾಕ್ಟರು ಕೆಲಸಮಾಡಿರುವ ಕಡೆ ಬಿರುಕು ಕಾಣಿಸಿಲ್ಲ. ಹಳೇ ಕೆರೆಯಲ್ಲಿ ಬಿರುಕು ಬಂದಿರುವುದರಿಂದ ಪರಿಶೀಲಿಸಬೇಕಾಗುವುದು.

CONSTRUCTION OF A CAUSEWAY ACROSS NORTH PENNAR RIVER

560. SRI K. M. PUTTASWAMY (Chickballapur):—

Will the Minister for Public Works be pleased to state :—

(*a*) Since when the construction of a causeway across North Pennar river near Pogettihalli in Chickballapur taluk is pending;

(*b*) Whether it would be complethd within a year;

(*c*) Whether any representation has been received for the construction of a causeway across Kumudvathi river near Puttaparthi in Bagepally Taluk;

(*d*) if so, the action taken ?

SRI BASAVARAJ MAGAVI (Deputy Minister for Public Works)

(*a*) Since about six years.

(*b*) After approval to the balance works, the work will be completed in about a year.

(*c*) Yes

(*d*) Its necessity is being examined

ಶ್ರೀ ಕೆ. ಎಂ. ಪುಟ್ಟಸ್ವಾಮಿ :— ಒಡ್ಡುದಾರಿ ಹಾಕಬೇಕೆಂದು ಕೆಲಸ ಶುರುಮಾಡಿ ಆರು ವರ್ಷವಾಯಿತು. ಮೊದಲು ಅಂದಾಜು ಮಾಡಿ, ಅದನ್ನು ಕಟ್ಟುವುದಕ್ಕೆ ಪ್ರಯತ್ನ ಪಟ್ಟು, ಪುನಃ ನಿಂತು ಹೋಗಿ, ವಿಜಿಲೆನ್ಸ್ ಕಮಿಷನ್ನಿಗೆ ಹೋಗಿ ತೊಂದರೆಯಲ್ಲಿದೆ. ಇನ್ನೊಂದು ವರ್ಷದೊಳಗಾಗಿ ಪೂರ್ತಿ ಮಾಡಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಯಾರು ಇದರಲ್ಲಿ ಇನ್‌ವಾಲ್ವ್ ಆಗಿದಾರೆ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಬಸವರಾಜ ಮಾಗಾವಿ :- ಇದು ನಾನ್-ಪ್ಲಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ರಸ್ತೆ, ಕಡಿಮೆ ವೆಚ್ಚದಲ್ಲಿ ಕಲ್ಲುಚಪ್ಪಡಿಗಳನ್ನು ಹಾಕಿ ಗಾಡಿಗಳು ಹೋಗುವುದಕ್ಕೆ ಹಾದಿ ಮಾಡಿಕೊಡಬೇಕು ಎಂದು ಅಂದಾಜು ಮಾಡಲಾಯಿತು. ಕೆಲಸ ಪ್ರಾರಂಭ ಮಾಡುವುದರಲ್ಲಿ, ಆ ರೀತಿ ಕೆಲಸ ಮಾಡಿದರೆ ಆಗುವುದಿಲ್ಲ, ವ್ಯಯ ಮಾಡಿದ್ದು ನಿರುಪಯೋಗವಾಗುತ್ತದೆ, ಎಂದು ಬೇರೆ ಎಸ್ಟಿಮೇಟ್ ತಯಾರುಮಾಡಲಾಗಿ ೬೦ ರಿಂದ ೮೦ ಸಾವಿರ ರೂಪಾಯಿವರೆಗೂ ಆಗುವ ಹಾಗೆ ಇದೆ ಎಂದು ಗೊತ್ತಾಯಿತು. ನಾನ್ ಪಿ. ಡಬ್ಲ್ಯು. ಡಿ. ರಸ್ತೆಗಳ ಮೇಲೆ ಇಷ್ಟೊಂದು ಹಣವನ್ನು ಹಾಕುವುದಕ್ಕೆ ಸರ್ಕಾರದ ಹತ್ತಿರ ಹಣದ ಅಭಾವ ವಿರುವುದರಿಂದ ಈ ವರ್ಷ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಕೂಡ ಅದನ್ನು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ:- ಹಿಂದೆ ಕೆಲಸ ಶುರು ಮಾಡುವುದಕ್ಕೆ ಪ್ರಾರಂಭ ಮಾಡಿ, ಕೆಲಸವನ್ನು ನಿಲ್ಲಿಸಿ ಸುಮಾರು ಆರು ವರ್ಷವಾಗಿದೆ. ಪ್ರವಾಹ ಬಂದಾಗ ಒಂದು ಕಡೆಯಿಂದ ಇನ್ನೊಂದು ಕಡೆಗೆ ಜನ